1) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಎಷ್ಟು ಎಕರೆ ಸ್ಥಳವನ್ನು ತೆಗೆದುಕೊಳ್ಳಲಾಗಿದೆ?

2) ಈ ಸ್ಥಳದ ಸುತ್ತಲು ಕಾಂಪೌಂಡ್ ಇಲ್ಲದೆ ಇರುವುದರಿಂದ ಒಂದು ಗಂಟೆಗೆ 30 ರಿಂದ 40 ಸಾವಿರ ರೂ.ಗಳ ಬೆಲೆ ಬಾಳುವ ಈ ಸ್ಥಳ ಅತಿಕ್ರಮಣವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ ಈ ಅತಿಕ್ರಮಣ ತಪ್ಪಿಸಲು ಕೂಡಲೇ ಕಾಂಪೌಂಡ್ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

4) ಈ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹ ಇಲ್ಲದೇ ಇರುವ ಸಂಗತಿ ನಿಜವೇ; ಹಾಗಿದ್ದಲ್ಲಿ, ಕೂಡಲೇ ಅವರಿಗೆ ವಸತಿ ಗೃಹಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1) 30 ಎಕರೆ 3 ಗುಂಟೆ

2) ಕಂದಾಯ ಇಲಾಖೆಯಿಂದ ಸಮಾಜ ಕಲ್ಯಾಣ ಇಲಾಖೆಗೆ ನಿವೇಶನವನ್ನು ಹಸ್ತಾಂತರಿಸುವ ಪೂರ್ವದಲ್ಲಿಯೇ ಸರ್ವೆ.ನಂ. 236 ಕ್ಷೇತ್ರದ 14 ಎಕರೆ 3 ಗುಂಟೆ ನಿವೇಶನದಲ್ಲಿ ಸುಮಾರು ಒಂದೂವರೆ ಎಕರೆಯಷ್ಟು ನಿವೇಶನವನ್ನು ಪಕ್ಕದಲ್ಲಿರುವ ರೈತರು:ಜನರು ಅತಿಕ್ರಮಿಸಿದ್ದಾರೆ. ಅದನ್ನು ಹೊರತುಪಡಿಸಿ ಬೇರೆ ಯಾವ ಕಡೆಗೂ ಅತಿಕ್ರಮಣವಾಗಿಲ್ಲ.

3) ನಿವೇಶನಕ್ಕೆ ಪೂರ್ಣ ತಂತಿಬೇಲಿ ಹಾಕಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ಗುತ್ತಿಗೆಯನ್ನು ನೀಡಲಾಗಿದೆ.

4) ನಿಜ. ಸಿಬ್ಬಂದಿ ವಸತಿ ಗೃಹಗಳನ್ನು ನಿರ್ಮಾಣ ಕಾರ್ಯ ಮಾಡಲು ಕರ್ನಾಟಕ ಭೂ ಸೇನಾ ನಿಗಮಕ್ಕೆ ಗುತ್ತಿಗೆ ನೀಡಿದೆ. ಇಡೀ ನಿವೇಶನ ಕಲ್ಲಿನ ಸ್ವರೂಪದ್ದಾಗಿದೆ. ಕಲ್ಲನ್ನು ಸಿಡಿಸಿದಾಗ ಹಾಲಿ ನಿರ್ಮಾಣ ಮಾಡಿರುವ ಎರಡು ಕಟ್ಟಡಗಳ ಭದ್ರತೆಗೆ ಹಾನಿಯಾಗುತ್ತದೆ ಎಂದು ಭೂ ಸೇನಾ ನಿಗಮ ಅಭಿಪ್ರಾಯಪಟ್ಟಿದೆ. ತಜ್ಞರ ಅಭಿಪ್ರಾಯ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ವರದಿ ನಿರೀಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕ ಉದ್ದಿಮೆಗಳು ಲೈಸನ್ಸ್ ಪಡೆದು ನಡೆಸಲು ತೊದರೆ ಅನುಭವಿಸುತ್ತಿರುವುದು

1319(1637) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಸಣ್ಣ ಉದ್ದಿಮೆಗಳು ನೋಂದಣಿಯಾಗಿರುತ್ತದೆ (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ಕಳೆದ 2 ವರ್ಷಗಳಲ್ಲಿ ಎಷ್ಟು ಸಣ್ಣ ಉದ್ದಿಮೆಗಳು ಬೆಳಗಾವಿ ಜಿಲ್ಲೆಯಲ್ಲಿ ನೋಂದಣಿಯಾಗಿರುತ್ತದೆ (ತಾಲ್ಲೂಕುವಾರು ಮಾಹಿತಿ ನೀಡುವುದು)?

ಇ) ಬೆಳಗಾವಿ ಜಿಲ್ಲೆಯಲ್ಲಿ ನೋಂದಣಿಯಾದ ಎಷ್ಟು ಸಣ್ಣ ಉದ್ದಿಮೆಗಳು ಕೆಲಸ ಪ್ರಾರಂಭ ಮಾಡಿರುತ್ತವೆ? ಎಷ್ಟು ಸಣ್ಣ ಉದ್ದಿಮೆಗಳು ಕೆಲಸ ಪ್ರಾರಂಭ ಮಾಡಿ ಮುಚ್ಚಿರುತ್ತವೆ (ತಾಲ್ಲೂಕುವಾರು ವಿವರ ಒದಗಿಸುವುದು)?

ಈ) ಬೆಳಗಾವಿ ಜಿಲ್ಲೆಯಲ್ಲಿ ಆರ್ಥಿಕ ಮುಗ್ಗಟ್ಟಿನಿಂದ, ವಿದ್ಯುಚ್ಛಕ್ತಿ ತೊಂದರೆಯಿಂದ ಹಾಗೂ ಮೂಲಭೂತ ಸೌಕರ್ಯಗಳಾದ ನೀರು, ರಸ್ತೆ ಇಲ್ಲದೆ ಇರುವುದರಿಂದ ಚಿಕ್ಕ ಉದ್ದಿಮೆಗಳು ಮುಚ್ಚಿರುತ್ತವೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಇದನ್ನು ಹೋಗಲಾಡಿಸಲು ಯಾವ ವಿಶೇಷವಾದ ಕ್ರಮವನ್ನು ಕೈಗೊಳ್ಳಲಾಗುವುದು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ಕಳೆದ 2 ವರ್ಷಗಳ ಸಣ್ಣ ಉದ್ದಿಮೆಗಳ ನೋಂದಣಿ ವಿವರಗಳು ಕೆಳಕಂಡಂತಿರುತ್ತದೆ;

2000-2001 - 16,554

2001-2002 - 16,964

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 2000-2001 - 1,298

2001-2002 - 1,387

ತಾಲ್ಲೂಕುವಾರು ಮಾಹಿತಿ ಕೆಳಕಂಡಂತಿದೆ:-

	ತಾಲ್ಲೂಕು	2000-01	2001-02
1.	ಬೆಳಗಾವಿ	348	326
2.	ಹುಕ್ಕೇರಿ	96	109
3.	ಖಾನಾಪುರ	73	78
4.	ಚಿಕ್ಕೋಡಿ	159	183
5.	ಅಥಣಿ	81	91
6.	ರಾಯಭಾಗ	88	100
7.	ಬೈಲಹೊಂಗಲ	112	120
8.	ಗೋಕಾಕ	169	180
9.	ಸವದತ್ತಿ	75	97
10.	ರಾಮದುರ್ಗ	96	103
	ಒಟ್ಟು :	1298	1387

ಇ) ಈ ಮೇಲಿನ ಎಲ್ಲಾ ನೋಂದಾಯಿತ ಸಣ್ಣ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ ಎಷ್ಟು ಸಣ್ಣ ಉದ್ದಿಮೆಗಳು ಕೆಲಸ ಪ್ರಾರಂಭ ಮಾಡಿ ಮುಚ್ಚಿರುತ್ತವೆ ಎಂಬ ಬಗ್ಗೆ ವರದಿಗಳು ಬಂದಿರುವುದಿಲ್ಲ(ರಿಪೋರ್ಟ್). ಆದಾಗ್ಯೂ ಇತ್ತೀಚೆಗೆ 2001ರ ಏಪ್ರಿಲ್‌ನಲ್ಲಿ ಭಾರತ ಸರ್ಕಾರದವರು ನಡೆಸಿದ ಸಣ್ಣ ಪ್ರಮಾಣ ಕೈಗಾರಿಕೆಗಳ ಮಾದರಿ ಸಮೀಕ್ಷಾ ವರದಿ ಪ್ರಕಾರ, ಸಮೀಕ್ಷೆ ನಡೆಸಿದ ಶೇ. 50ರಷ್ಟು ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿದು ಬಂದಿದೆ. ಉಳಿದ ಶೇ. 50 ರಷ್ಟು ಘಟಕಗಳು ರೋಗಗ್ರಸ್ತವಾಗಿರುವುದಾಗಿಯೂ, ರೋಗಗ್ರಸ್ತವಾಗುವ ಹಾದಿಯಲ್ಲಿರುವುದಾಗಿಯೂ ಅಥವಾ ಮುಚ್ಚಿರುವುದಾಗಿಯೂ ವರದಿಯಾಗಿದೆ. ಸಣ್ಣ ಕೈಗಾರಿಕೆಗಳ ಸಂಪೂರ್ಣ ಸ್ಥಿತಿಗತಿಗಳನ್ನು ಅರಿಯಲು ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಸಣ್ಣ ಕೈಗಾರಿಕೆಗಳ ಗಣತಿ ಕಾರ್ಯವನ್ನು ಹಮ್ಮಿಕೊಂಡಿವೆ.

ಈ) ಮೇಲ್ಕಂಡಂತೆ

ಉ) ರಾಜ್ಯದ ಕೈಗಾರಿಕೆಗಳ ಸರ್ವತೋಮುಖ ಬೆಳವಣಿಗೆಗಾಗಿ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. ವಿವರಗಳು ಕೆಳಕಂಡಂತಿವೆ:-

1) ತಂತ್ರಜ್ಞಾನ ಉನ್ನತೀಕರಣ

2) ಗುಣಮಟ್ಟ ಉನ್ನತೀಕರಣ

3) ಮೂಲಭೂತ ಸೌಕರ್ಯ ನಿಧಿ

4) ವ್ಯವಹಾರ ಪರಿಸರದ ಅನಿಯಂತ್ರಣ

5) ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮಾರಾಟ ಸಹಾಯ

6) ಐಎಸ್‌ಓ-9000, ಐಎಸ್‌ಓ-14000 ಪ್ರಮಾಣ ಪತ್ರ ಪಡೆದ ಘಟಕಗಳಿಗೆ ಉತ್ತೇಜನ ನೀಡುವುದು.

7) ಡಬ್ಲ್ಯು.ಟಿ.ಓ ರಿಲೇ ಕೇಂದ್ರ - ಇದರಲ್ಲಿ ಕೈಗಾರಿಕಾ ಉದ್ಯಮಿಗಳಿಗೆ ಈ ಒಪ್ಪಂದದಿಂದ ಆಗಿರುವ ತೊಂದರೆಗಳ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಮಾಹಿತಿಗಳನ್ನು ನೀಡುವುದು.

Annexure

Registration of Small Industries in Karnataka During 2000-2001 and 2001-2002 (Disstrictwise)

Sl.No.	District	No. of Units	
		2000-2001	2001-2002
1	2	3	4
01	Bangalore (Urban)	3116	2666
02	Belgaum	1298	1385
03	Bellary	531	621
04	Bijapur	394	422
05	Bidar	407	360
06	Chickmagalur	269	287
07	Chitradurga	307	339
08	Kodagu	167	172
09	Dharwad	867	1034
10	Gulbarga	527	564
11	Hassan	511	568
12	Uttara Kannada	315	306
13	Dakshina Kannada	763	822
14	Kolar	802	613
15	Mandya	438	470
16	Mysore	1052	1100
17	Raichur	468	468
18	Shimoga	468	516

1	2	3	4
19	Tumkur	933	1025
20	Bangalore (Rural)	1037	1032
21	Bagalkote	321	342
22	Chamarajanagar	255	277
23	Davanagere	388	444
24	Gadag	314	339
25	Haveri	193	209
26	Koppal	199	220
27	Udupi	424	363
	Total	**16554**	**16964**

ಉತ್ತರ ಕರ್ನಾಟಕದಲ್ಲಿ ಭಾರೀ ಮತ್ತು ಮಧ್ಯಮ ಉದ್ಯಮಗಳನ್ನು ಸ್ಥಾಪಿಸಲು ಹೊಸ ಲೈಸೆನ್ಸ್ ನೀಡುವುದು

1320(1639) ಶ್ರೀ ಕೌಜಲಗಿ ಮಹಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 2 ವರ್ಷಗಳಲ್ಲಿ ರಾಜ್ಯದಲ್ಲಿ ಭಾರೀ ಮತ್ತು ಮಧ್ಯಮ ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಎಷ್ಟು ಹೊಸ ಲೈಸೆನ್ಸ್ ನೀಡಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು)?

ಆ) ಲೈಸನ್ಸ್ ಪಡೆದ ನಂತರ ಎಷ್ಟು ಉದ್ದಿಮೆಗಳು ಪ್ರಾರಂಭಗೊಂಡಿರುತ್ತವೆ (ವಿವರ ನೀಡುವುದು)?

ಇ) ಉತ್ತರ ಕರ್ನಾಟಕದಲ್ಲಿ ಭಾರೀ ಮತ್ತು ಮಧ್ಯಮ ಉದ್ದಿಮೆಗಳು ಬೆಳೆಯಲು ಯಾವ ವಿಶೇಷವಾದ ಸವಲತ್ತುಗಳನ್ನು ಕೊಡಲಾಗುತ್ತಿದೆ?

ಈ) ಭಾರಿ ಮತ್ತು ಮಧ್ಯಮ ಉದ್ದಿಮೆಗಳು ಕೇವಲ ಬೆಂಗಳೂರು, ತುಮಕೂರು, ಮೈಸೂರುಗಳಲ್ಲಿ ಮಾತ್ರ ಸ್ಥಾಪನೆಗೊಳ್ಳುತ್ತಿರುವ ಸಂಗತಿ ನಿಜವೇ?

ಉ) ಹಾಗಿದ್ದಲ್ಲಿ, ರಾಜ್ಯದ ಬೇರೆ ಬೇರೆ ಭಾಗಗಳಿಗೂ ಸಹ ಪ್ರಾರಂಭಿಸಲು ವಿಶೇಷವಾದ ಕ್ರಮವನ್ನು ಹಮ್ಮಿಕೊಳ್ಳಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಸಚಿವರು):

ಅ) ಕಳೆದ 2 ವರ್ಷಗಳಲ್ಲಿ ಅಂದರೆ 1-4-2000 ರಿಂದ 31-3-02 ರವರೆಗೆ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆಯು ಒಟ್ಟು 395 ಕೈಗಾರಿಕಾ ಯೋಜನೆಗಳಿಗೆ (ರೂ. 50.00 ಕೋಟಿಗಳವರೆಗೆ ಬಂಡವಾಳ ಹೂಡಲ್ಪಡುವ) ಮಂಜೂರಾತಿ ನೀಡಿದೆ. ಹಾಗೂ ಈ ಯೋಜನೆಗಳಲ್ಲಿ ಒಟ್ಟು ರೂ. 6554.88 ಕೋಟಿಗಳಷ್ಟು ಬಂಡವಾಳ ಹೂಡಿಕೆಯಾಗಲಿದ್ದು 1,84,211 ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ಕಳೆದ 2 ವರ್ಷಗಳಲ್ಲಿ ಉನ್ನತ ಮಟ್ಟದ ಸಮಿತಿಯು 109 ಯೋಜನೆಗಳಿಗೆ ರೂ. (50.00 ಕೋಟಿಗಳಿಗಿಂತ ಹೆಚ್ಚು ಬಂಡವಾಳ ಮಂಜೂರಾತಿ ನೀಡಿದೆ. ಹಾಗೂ ಈ ಯೋಜನೆಗಳಲ್ಲಿ ಒಟ್ಟು ರೂ. 44,321,22 ಕೋಟಿಗಳಷ್ಟು ಬಂಡವಾಳ ಹೂಡಿಕೆಯಾಗಲಿದ್ದು 1,42,243 ಜನರಿಗೆ ಉದ್ಯೋಗವಕಾಶ ದೊರಕಲಿದೆ. ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ.